# ಜನಪದ ಹಾಡ್ಗತೆ: ಸಂಘರ್ಷ ಮತ್ತು ಮಹಿಳಾ ಸಂವೇದನೆ

**ಶಾಲಿನಿ ಎಂ.ಸಿ.**

ಸಂಶೋಧನಾರ್ಥಿ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

DOI: https://doi.org/10.5281/zenodo.17013664

## ABSTRACT:

ಜನಪದ ಹಾಡ್ಗತೆಗಳಲ್ಲಿ ಸಂಘರ್ಷ ಮತ್ತು ಮಹಿಳಾ ಸಂವೇದನೆ ಎಂಬುದು ಜನಪದ ನೈಜ ಬದುಕಿನ ಸಹಜ ಸ್ವಾಭಾವಿಕತೆಯನ್ನು ತೆರೆದಿಡುವಂತಹ ಲೇಖನ. ಹಾಡ್ಗತೆಗಳನ್ನು ಕೂಲಂಕಷವಾಗಿ ಅಧ್ಯಯನಕ್ಕೆ ತೊಡಗಿಸುತ್ತಾ ಹೋದಂತೆ ಸಮಾಜದ ಬದುಕಿನ ಜನರ ನೈಜ ಚಿತ್ರಣವು ನಮ್ಮ ಮುಂದೆ ತೆರೆದುಕೊಳ್ಳುತ್ತದೆ. ಅಂತಹ ನೈಜ ಚಿತ್ರಣಗಳಲ್ಲಿ ಒಂದಾದಂತಹ 'ಮರೆಯಾದ ಮಲಕವ್ವ' ಕಥನ ಕಾವ್ಯ, 'ಯಲುರಾಜನ ಮಡದಿ' ಕಥನ ಕಾವ್ಯ ಹಾಗೂ 'ಒಡ್ಡರಬೊಯಿ' ಮತ್ತು 'ಕೆರೆಗೆ ಹಾರ'ದಂತಹ ಕಥನ ಕಾವ್ಯಗಳನ್ನು ಪುರೋಹಿತಶಾಹಿ ಹಾಗೂ ಊಳಿಗಮಾನ್ಯ ವ್ಯವಸ್ಥೆ, ಸ್ತ್ರೀವಾದದ ನೆಲೆಯನ್ನು ಈ ಲೇಖನದ ಮೂಲಕ ವಿಮರ್ಶಿಸಲಾಗಿದೆ.

ಸಮಾಜದಲ್ಲಿ ಹೆಣ್ಣಿನ ಸಂವೇದನೆ ಹಾಗೂ ಬದುಕಿನ ಸಂಘರ್ಷವನ್ನು ಕುರಿತಂತಹ ಆಲೋಚನೆಗಳು ಇಲ್ಲಿ ಅಡಕವಾಗಿವೆ. ಜೊತೆಗೆ ಧರ್ಮ ಸಂಘರ್ಷ, ಜಾತಿ ಸಂಘರ್ಷ ಹಾಗೂ ಸಾಮಾಜಿಕವಾಗಿ ಹೆಣ್ಣು ಅನುಭವಿಸಿದಂತಹ ಶೋಚನೀಯ ಬದುಕಿನ ಚಿತ್ರಣಗಳು ಈ ಕಾವ್ಯದ ಮೂಲಕ ವಿಶ್ಲೇಷಣೆಗೆ ಒಳಪಟ್ಟಿವೆ.

ಧರ್ಮ ಸಂಘರ್ಷ ಹಾಗೂ ಜಾತಿ ಸಂಘರ್ಷದ ನೆಲೆಯಲ್ಲಿ ನಡೆಸುವ ಹುಡುಕಾಟವು ಧರ್ಮಾತೀತವಾದ ಆಲೋಚನೆಗೆ ಸಂಬಂಧಿಸಿದೆ, ಆದರೂ ಅವುಗಳನ್ನು ಹತ್ತಿಕ್ಕಿದ ಸಮಾಜದ ಸೂಕ್ಷ್ಮ ಚಿತ್ರಣಗಳು ನಮ್ಮ ಜನಪದರ ಚಿಂತನೆಯಲ್ಲಿ ಇರುವುದನ್ನು ಗುರುತಿಸಿಕೊಳ್ಳಲು ಸಾಧ್ಯವಾಗಿಸಿವೆ. ಊಳಿಗಮಾನ್ಯ ವ್ಯವಸ್ಥೆಯ ಅಡಿಯಲ್ಲಿ ಶೋಷಿತರಾಗುವ ತಳ ಸಮುದಾಯದ ಹೆಣ್ಣಿನ ಆಂತರಿಕ ತಲ್ಲಣಗಳು ಇಲ್ಲಿ ವಿಶ್ಲೇಷಣೆಗೆ ಒಳಗಾಗಿವೆ.

ಸಾಂಸ್ಕೃತಿಕವಾಗಿ ಹೆಣ್ಣನ್ನು ಬಲಿಯಾಗಿಸಿದ ಸಮಾಜದ ವಿರುದ್ಧ ಸ್ತ್ರೀ ತನ್ನ ಸಂವೇದನೆಯನ್ನು ಮೌನವಾಗಿ ಪ್ರತಿರೋಧಿಸಿದ ನೆಲೆಯನ್ನು ಗುರುತಿಸಲಾಗಿದೆ. ಇವು ಪುರುಷಾಧಿಕಾರದ ನೆಲೆ ಹಾಗೂ ಪುರೋಹಿತಶಾಹಿ ಅಧಿಕಾರದ ನೆಲೆಯೊಳಗೆ ಹೆಣೆಯಲ್ಪಟ್ಟಿದ್ದು, ಸಮಾಜಕ್ಕೆ ಹೆಣ್ಣು ನೀಡಿದ ಪ್ರತಿಕ್ರಿಯೆಯಾಗಿವೆ. ಕಾವ್ಯವನ್ನು ಕಟ್ಟುವುದರ ಮೂಲಕ ಹಾಡ್ಗತೆಗಳಾಗಿ, ಬದುಕಿನ ಬವಣೆಗಳಾಗಿ ಅಭಿವ್ಯಕ್ತಗೊಂಡಿವೆ. ಹಾಗಾಗಿ ಜನಪದ ಕಥನ ಕಾವ್ಯಗಳಲ್ಲಿ ಹೆಣ್ಣಿನ ಸೂಕ್ಷ್ಮ ಸಂವೇದನೆಯ ಆಲೋಚನೆಗಳಿವೆ.

**KEYWORDS:**

ಊಳಿಗ ಮಾನ್ಯ ವ್ಯವಸ್ಥೆ, ಜಾತಿ ಸಂಘರ್ಷ, ಸ್ತ್ರೀ ಸಂವೇದನೆ, ಮೌನ ಪ್ರತಿರೋಧ, ಪುರೋಹಿತಶಾಹಿ.

ಮೌಖಿಕ ಪರಂಪರೆಯ ನೆಲೆಯಲ್ಲಿ ಜಾನಪದಕ್ಕೆ ಮಹತ್ತರವಾದ ವಿಶಿಷ್ಟ ಸ್ಥಾನವಿದೆ. ಬದುಕಿನ ಹಲವು ಮಜಲುಗಳನ್ನು ದಾಟಿಕೊಂಡು, ತನ್ನದೇ ಆದಂತಹ ರೂಪ ಪಡೆದು, ಬಾಯಿಂದ ಬಾಯಿಗೆ ಹರಡಿದ ಈ ಸಂಸ್ಕೃತಿ, ಜನಮಾನಸರ ನೈಜ ಬದುಕಿನ ಸಹಜ ಸ್ವಾಭಾವಿಕತೆಯನ್ನು ತೆರೆದಿಡುತ್ತದೆ. ಜನಸಾಮಾನ್ಯರ ಬದುಕು-ಬವಣೆಗಳನ್ನು ಭಿನ್ನ ನೆಲೆಗಳಲ್ಲಿ ತೆರೆದಿಡುವ ಅತ್ಯಂತಿಕವಾದ ಶಕ್ತಿ ಈ ಜಾನಪದ ಪರಂಪರೆಗೆ ಇದೆ.

ಜಾನಪದ ಒಂದು ದೇಹವಾದರೆ, ಅದರ ಮಹತ್ತರವಾದ ಅಂಗವೇ ಈ ಕಥನಗೀತೆ/ಹಾಡ್ಗತೆಗಳು. ಜಾನಪದದ ಕಾವ್ಯವನ್ನು ಎರಡು ರೀತಿಯಾಗಿ ವಿಂಗಡಿಸಿಕೊಳ್ಳಬಹುದು. ಒಂದು ಪದ್ಯ ಸಾಹಿತ್ಯ ಎರಡನೆಯದು ಗದ್ಯ ಸಾಹಿತ್ಯ. ಪದ್ಯ ಸಾಹಿತ್ಯದ ಪ್ರಮುಖ ಭಾಗವಾದ ಹಾಡ್ಗತೆಗಳನ್ನು ನಾನಾ ಹೆಸರುಗಳಿಂದ ಗುರುತಿಸಲಾಗುತ್ತದೆ. ಅವುಗಳೆಂದರೆ 'ಹಾಡ್ಗತೆ', 'ಕಥನಕಾವ್ಯ', 'ಹಾಡುವ ಕಥನ', 'ಕಾವ್ಯಕಥನ', 'ಕಥನಗೀತೆ' ಇತ್ಯಾದಿ ಹೆಸರುಗಳಿವೆ. ಕನ್ನಡ ನಾಡಿನಲ್ಲಿ ಹಾಡ್ಗತೆಗಳನ್ನು ಗುರುತಿಸಿದ ಕೀರ್ತಿ ಜಾನಪದ ವಿದ್ವಾಂಸರಾದ ಜೀ.ಶಂ.ಪರಮಶಿವಯ್ಯನವರಿಗೆ ಸಲ್ಲುತ್ತದೆ. ಹಾಡ್ಗತೆಗಳನ್ನು ಕೂಲಂಕಷವಾಗಿ ಅಭ್ಯಸಿಸುತ್ತಾ ಹೋದಂತೆ ಸಮಾಜದ ಜನರ ಬದುಕಿನ ಚಿತ್ರಣವೇ ತೆರೆದುಕೊಳ್ಳುತ್ತದೆ. ಹೆಣ್ಣು ಅನುಭವಿಸಿದ ನೋವು-ನಲಿವುಗಳು, ಶೋಷಣೆ, ದುರಂತ ಬದುಕಿನ ಸ್ತ್ರೀ ಸಂವೇದನೆಯ ಗುಚ್ಛವೇ ಈ ಹಾಡ್ಗತೆಗಳು. ಇವುಗಳನ್ನು ಜಾನಪದದ 'ಒಡಲಿನ ಶಬ್ದ'ವೆಂದೂ ಹೇಳಬಹುದು. ವಿಶೇಷವಾಗಿ ಹಾಡ್ಗತೆಗಳು ಮಹಿಳಾ ಸಂವೇದನೆಯ ಎಳೆಗಳಿಂದ ಪ್ರಧಾನವಾಗಿ ಹೆಣೆಯಲ್ಪಟ್ಟಿವೆ. ಪುರುಷನ ಶೋಷಣೆ, ದಬ್ಬಾಳಿಕೆ ಹೆಣ್ಣು ಜೊತೆಗೆ ಶೋಷಿತಳಾಗುವ ಸಂದರ್ಭದ ಹಾಡ್ಗತೆಗಳೇ ಪ್ರಧಾನವಾಗಿ ಕಾಣಸಿಗುತ್ತವೆ. ಈ ಎಲ್ಲದರ ಹಿಂದೆ ಊಳಿಗಮಾನ್ಯ ವ್ಯವಸ್ಥೆಯ ಚಹರೆಗಳು ಕಾಣಸಿಗುತ್ತವೆ.

ಕಥನಗೀತೆ/ಹಾಡ್ಗತೆಗಳನ್ನು ಅವುಗಳ ವಸ್ತು ಮತ್ತು ಪಾತ್ರದ ಮೂಲಕ ಅವುಗಳಲ್ಲಿ ವ್ಯಕ್ತವಾಗಿರುವ ಸಂಘರ್ಷವನ್ನು ಗುರುತಿಸಲಾಗಿದೆ. ಪ್ರಾಸಂಗಿಕವಾಗಿ 'ಮರೆಯಾದ ಮಲಕವ್ವ', 'ಯಲುರಾಜನ ಮಡದಿ', 'ಭಾಗೀರಥಿ', 'ಒಡ್ಡರಬೊಯಿ'ಯಂತಹ ಕಥನಕಾವ್ಯಗಳು. ಇವೆಲ್ಲವೂ ಮಹಿಳೆಯ ಬದುಕಿನ ಸುತ್ತಾ ಕಟ್ಟಿರುವ ಹಾಡ್ಗತೆಗಳಾಗಿವೆ ಮತ್ತು ಹೆಂಗಸರೇ ಹಾಡಿರುವುದು ಇದರ ಮತ್ತೊಂದು

ವೈಶಿಷ್ಟ್ಯವೆನಿಸಿದೆ. ಇದರಲ್ಲಿ ಪ್ರೀತಿ, ಒಲುಮೆಗಳ ಕೊರತೆ, ಪತಿಯ ಅನಾದರ, ಕೋಮುವಾದ, ಜಾತಿ ಸಂಘರ್ಷ, ಕೌಟುಂಬಿಕ ಕಿರುಕುಳ, ವೈಧವ್ಯ, ಮುಂತಾದ ಸಂಗತಿಗಳನ್ನು ಕುರಿತಂತಹ ವಸ್ತುಗಳ ಸ್ವರೂಪದ್ದಾಗಿವೆ.

ತಾನು ಅನಕ್ಷರಸ್ಥಳಾದರೂ ಸಹ ತನ್ನ ಜ್ಞಾನದ ಮೊತ್ತದಿಂದ ಲೋಕದ ಅನುಭವಗಳನ್ನು ಅನುಭವಿಸಿ, ಅವುಗಳನ್ನು ಪದಕ್ಕೆ ಬೆಸೆಸಿ ಹಾಡಿತ್ತಿದ್ದ ಆ ಕಾಲಕ್ಕೇ ಮಹಿಳೆ ಬುದ್ಧಿವಂತಳು, ಜ್ಞಾನವಂತೆ ಎಂಬುದನ್ನು ತಿಳಿಯಬಹುದಾಗಿದೆ. ಉದಾಹರಣೆಗೆ ಕವಿರಾಜ ಮಾರ್ಗಕಾರನ 'ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣಿತ ಮತಿಗಳ್' ಎಂಬ ಸಾಲು ಅಕ್ಷರ ಜ್ಞಾನವಿಲ್ಲದ ಸಮುದಾಯದವರ ಅರಿವಿನ ನೆಲೆಯನ್ನು ಸೂಚಿಸುತ್ತದೆ. ಇದರಲ್ಲಿ ಮಹಿಳೆಯರೂ ಇರುವುದನ್ನು ಕಂಡುಕೊಳ್ಳಲು ಸಾಧ್ಯವಿದ್ದು, ಅವಳು ಬುದ್ಧಿವಂತಳು ಎಂಬುದನ್ನು ಸಾಬೀತುಪಡಿಸುತ್ತದೆ.

"ಮಾನವ ಕುಲದ 'ಅನಾಗರಿಕ ಹಂತ' ಎಂದು ಕರೆಯಲ್ಪಡುವ ಆದಿಕಾಲದಲ್ಲಿಯೇ ಮಹಿಳೆ ವಿಶೇಷವಾದ ಸ್ಥಾನ ಪಡೆದಿದ್ದನ್ನು ಸಂಶೋಧನೆಗಳು ದೃಢಪಡಿಸಿವೆ. ಅಲೆಮಾರಿ ಜೀವನದಿಂದ ಮುಕ್ತಿ ಹೊಂದಿ ಸ್ಥಿರವಾಗಿ ಒಂದು ಪ್ರದೇಶದಲ್ಲಿ ನಿಲ್ಲಲು ಪ್ರಮುಖ ಕಾರಣ ಮಹಿಳೆಯಾಗಿದ್ದಾಳೆ. ಅವಳಿಂದಲೇ 'ಕೃಷಿ ಸಂಸ್ಕೃತಿ' ಆರಂಭವಾದದ್ದು ಜೊತೆಗೆ ಮಾನವ ಕುಲದ ಬೆಳವಣಿಗೆ, ವಿಕಸನಕ್ಕೆ ಮೂಲ ಮಾತೃ ಇವಳು. ಇಂತಹ ಮಾತೃಸಂಸ್ಕೃತಿ ಪ್ರಧಾನವಾಗಿದ್ದ ಕಾಲಘಟ್ಟದಲ್ಲಿ ಮಹಿಳೆಗೆ ಉನ್ನತ ಸ್ಥಾನವಿತ್ತು, ಗೌರವವಿತ್ತು ಆಕೆಯನ್ನು ಸಂತಾನ ನೀಡುವ ಕಾರಣದಿಂದಾಗಿ ಪೂಜಿಸಲಾಗುತ್ತಿತ್ತು. ಆದರೆ ಕಾಲಾಂತರದಲ್ಲಿ ಮಾತೃ ಪ್ರಧಾನ ಕುಟುಂಬ ವ್ಯವಸ್ಥೆಯು ಪಿತೃ ಪ್ರಧಾನ ವ್ಯವಸ್ಥೆಯಾದಾಗ ಅವಳನ್ನು ಎರಡನೇ ದರ್ಜೆಯ ಪ್ರಜೆಯನ್ನಾಗಿ ಒತ್ತಾಯವಾಗಿ ಕರೆಯಲಾಯಿತು."[1] ವಿಪರ್ಯಾಸ ಎಂಬಂತೆ ಅವಳನ್ನು ಭೌತಿಕವಾದ ವಿಚಾರಗಳಿಂದ ಶೋಷಿಸಲ್ಪಡಲು, ಕುಟುಂಬ, ಮನೆಕೆಲಸ, ಹೆರುವುದು ಹೀಗೆ ಅವರನ್ನು ಮಾನಸಿಕವಾಗಿ ಬಂಧಿಸಲಾಯಿತು. ಪಿತೃ ಸಮಾಜದಲ್ಲಿ ಹೆಣ್ಣು ತಾನು ಬೆಳೆದ ಪರಿಸರವನ್ನು ಬಿಟ್ಟು ಅಪರಿಚಿತ ಜನರನ್ನು ತನ್ನದೇ ಕುಟುಂಬವೆಂದು ಪರಿಭಾವಿಸಿ ಜೀವನ ನಡೆಸಿದ ಚಿತ್ರಣಗಳನ್ನು ಜನಪದ ಹಾಡ್ಗತೆಗಳು ಕಟ್ಟಿಕೊಡುತ್ತವೆ.

ಪಿತೃ ಪ್ರಾಧಾನ್ಯತೆ ಇದ್ದರೂ ಸಹ ಹೊರಗಿನಿಂದ ಬಂದ ಹೆಣ್ಣು ಮತ್ತೊಬ್ಬ ಹೆಣ್ಣಿನಿಂದಲೇ ಶೋಷಣೆಗೆ ಒಳಗಾಗುವುದು ಗಮನಾರ್ಹ ಸಂಗತಿ. ಆಕೆ ಬಂದು ಎಲ್ಲಿ ತನ್ನ ಸ್ಥಾನಕ್ಕೆ ಕುತ್ತು ತರುವಳೋ ಎಂಬುದರ ದಿಟ್ಟ ಹಾಗೂ ದೂರಾಲೋಚನೆಯ ಚಿಂತನೆಯಿಂದ ಮತ್ತಷ್ಟು ಶೋಷಿಸಲು ಆರಂಭಿಸುತ್ತಾಳೆ. ಕಾರಣ ಸಾಮಾಜಿಕ ವ್ಯವಸ್ಥೆಯಲ್ಲಿ ಪುರುಷನೇ ಅಧಿಪತಿಯೆನಿಸಿದರು, ಅಲ್ಲಿ ಹೆಣ್ಣು ತನ್ನ ಸ್ಥಾನದ

ಉಳಿವಿಗಾಗಿ, ಮತ್ತೊಂದು ಹೆಣ್ಣನ್ನು ಶೋಷಿಸುವ ಸಂವೇದನೆಗಳಿವೆ. ಇವು ಆಕೆಯ ನೋವಿನಿಂದ ಬೆಂದು ಬಂದ ಆಕ್ರೋಶಗಳೇ ಆಗಿವೆ. ಈ ನೆಲೆಯಲ್ಲಿ ಅತ್ತೆ–ನಾದಿನಿ–ಅತ್ತಿಗೆ ಹಾಗೂ ಓರಗಿತ್ತಿ ಇತ್ಯಾದಿಯಾಗಿ ಕಾಣಸಿಗುತ್ತಾರೆ. ಇದಕ್ಕೆ ಉದಾಹರಣೆಯಾಗಿ 'ಮರೆಯಾದ ಮಲಕವ್ವ' ಕಥನಕಾವ್ಯವನ್ನು ತೆಗೆದುಕೊಳ್ಳಬಹುದು. ಇಲ್ಲಿ ಹೆಣ್ಣಿನಿಂದ ಹೆಣ್ಣೇ ಅಂದರೆ ಅತ್ತಿಗೆಯಿಂದ ನಾದಿನಿಯೇ ಪರೋಕ್ಷವಾಗಿ ಹತ್ಯೆಯಾಗುವ ವಿಚಾರವನ್ನು ಈ ಕಾವ್ಯ ತನ್ನ ವಸ್ತುವಾಗಿಸಿಕೊಂಡಿದೆ. ಆದರೆ ಇದರ ಹಿಂದಿರುವ ರಾಜಕಾರಣವೇ ಭಿನ್ನವಾಗಿದೆ.

ಮಲಕವ್ವ 'ತುರುಕರ ಸಂಗ ಮಾಡಿದಳೆಂಬ' ಚಾಡಿಯನ್ನು ಅತ್ತಿಗೆಯಾದ ಈರವ್ವ ತನ್ನ ಗಂಡನಾದ ದೇವಣ್ಣನಿಗೆ ಹೇಳುತ್ತಾಳೆ. ಆ ವಿಷಯ ತಿಳಿದಾತ ದೂರದ ಕಾಡಿಗೆ ಕರೆದುಕೊಂಡು ಹೋಗಿ ಆಕೆಯನ್ನು ಕಡಿದುಬಿಡುತ್ತಾನೆ. ಇದು ಅತ್ತಿಗೆ ನಾದಿನಿಯನ್ನು ಪರೋಕ್ಷವಾಗಿ ಶೋಷಿಸುವ ಪರಿ. ಮೇಲುನೋಟಕ್ಕೆ ಇದು ಹೆಣ್ಣಿನ ಅಸೂಯೆ ಎಂಬಂತೆ ಕಂಡುಬಂದರು, ಇಲ್ಲಿ ಗಮನಿಸಬೇಕಾದ ಸಂಗತಿ 'ಮಲಕವ್ವ ತುರುಕನ ಸಹವಾಸ ಮಾಡಿದಳು' ಎಂಬುದು ಮುಖ್ಯವಾಗುತ್ತದೆ. ಧರ್ಮಾತೀತವಾದ ಆಲೋಚನೆಗಳು ಬಂದಾಗ್ಯೂ ಅವುಗಳನ್ನು ಹತ್ತಿಕ್ಕಿದ ಸಮಾಜದ ಸೂಕ್ಷ್ಮ ಚಿತ್ರಣಗಳು ನಮ್ಮ ಜನಪದರ ಚಿಂತನೆಯಲ್ಲಿವೆ. ಇಂತಹ ಘಟನೆಗಳು ಸಂಭವಿಸಿದಾಗ, ಅಂತರ್ಜಾತಿ ವಿವಾಹವಾದಾಗ ಜರುಗಿದ ವಿದ್ಯಮಾನಗಳನ್ನು ಕಾವ್ಯವಾಗಿಸಿ ಸಮಾಜದ ನಿಲುವಿಗೆ ಬಿಟ್ಟಿದ್ದಾರೆ. ಈ ಕಾವ್ಯ ಜಾತಿ, ಧರ್ಮ ಸಂಘರ್ಷದ ನೆಲೆಯನ್ನು ಹಾಗೂ ಮರ್ಯಾದಾ ಹತ್ಯೆಯಂತಹ ವಿಚಾರಗಳನ್ನು ಚರ್ಚಿಸಲು ಹಾಗೂ ಸಮಕಾಲೀನ ಚಿಂತನೆಗೆ ಒಳಪಡಿಸಲು ಸಾಧ್ಯವಾಗಿಸಿ ಕೊಟ್ಟಿದೆ.

ಮಲಕವ್ವಳ ಮೇಲಿನ ಅಸೂಯೆಯಿಂದ ಆದಂತಹ ಕೊಲೆ ಎನ್ನುವುದಕ್ಕಿಂತ, ಇದು ಧರ್ಮದ, ಜಾತಿಯ ಕಾರಣಕ್ಕಾಗಿ ಘಟಿಸಿದ ಘಟನೆ ಎಂದರೆ ತಪ್ಪಾಗದು. ತುರುಕರ ಸಂಗವನ್ನು ಮಾಡಿದಳು ಎಂದರೆ ಮುಸಲ್ಮಾನ ಯುವಕನ ಪ್ರೀತಿ ಮಾಡಿದಳು ಎನ್ನುವ ದೃಢವಾದ ಕಾರಣವೇ ಈ ಕಾವ್ಯದ ಆಳವಾದ ವಸ್ತುವಾಗಿದೆ. ಆದರೆ 'ಸಂಗ' ಮಾಡಿದಳು ಎಂಬ ಪದವು ಎರಡು ರೀತಿಯಲ್ಲಿ ಧ್ವನಿಸುತ್ತದೆ. ಒಂದು ಆತನ ಪ್ರೀತಿ ಬಯಸಿದಳೇ? ಅಥವಾ ಆತನೊಂದಿಗೆ ಭೌತಿಕವಾದ ಸಂಬಂಧವನ್ನು ಹೊಂದಿದ್ದಳೆ? ಎಂಬುದು ತರ್ಕಬದ್ಧವಾಗಿದೆ. ಆದರೆ ಕಾವ್ಯ ಇಡಿಯಾಗಿಯೆಲ್ಲೂ ಈ ವಿಚಾರವನ್ನು ದಾಖಲಿಸದೆ, ಕೇವಲ ಅತ್ತಿಗೆ–ನಾದಿನಿಯರ ಕಲಹ ಎಂಬ ಬಣ್ಣವನ್ನು ಸಮಾಜ ಲೇಪಿಸಿಬಿಟ್ಟಿದೆ. ಇಂತಹ ಕೋಮುವಾದದ ನೆಲೆಯನ್ನು ಕಾವ್ಯದ ಮೂಲಕ ಕಟ್ಟಿಕೊಟ್ಟ ಆದಿಮರ ಪ್ರಜ್ಞಾಶೀಲ ಗುಣ ಬಹುಮುಖ್ಯವಾಗುತ್ತದೆ.

ಅದೇರೀತಿ 'ಯಲುರಾಜನ ಮಡದಿ'ಯ ಕಾವ್ಯದಲ್ಲಿ ವರ್ಗ ಸಂಘರ್ಷದ

ನೆಲೆಯಿದ್ದರೂ ಆ ಕಾವ್ಯ ಗುರುತಿಸಿಕೊಂಡಿದ್ದು ಮಾತ್ರ ಪುರುಷ ಹಾಗೂ ಪುರೋಹಿತಶಾಹಿಯ ನೆಲೆಯಲ್ಲಿ. ರಾಜನ ಮಡದಿಯಾದರು ಹೆಣ್ಣಾದ ಆಕೆ ಬಯಸಿದ್ದು ಪ್ರೇಮವನ್ನು, ಅತ್ಯಂತಿಕವಾದ ಸಂಗವನ್ನು ಎಂಬುದು ವಿಶಿಷ್ಟ. ಕಾವ್ಯದ ಉದ್ದಕ್ಕೂ ಆಕೆ ಎಲ್ಲಿಯೂ ಹೊಲೆಯನ ಮದುವೆ ಆಗುತ್ತೇನೆಂದು ಹೇಳಿಯೇ ಇಲ್ಲ ಬದಲಿಗೆ ಹೊಲೆಯನ ಸಂಗಡ ಹೋಗುತ್ತೇನೆಂದು ತನ್ನ ಅಕ್ಕಳಿಗೆ ತಿಳಿಸುತ್ತಾಳಷ್ಟೆ.

**ಕೇಳೇಲೇ ನನ್ನಕ್ಕಾ,**
**ಜಾತೀ ಹೋದಾರೇನೇ**
**ಹೊಡುದಾರೇ ಏನಕ್ಕಾ?**
**ಬಯ್ದಾರೆ ಏನಕ್ಕಾ**
**ಹೊಲಿನ್ ಸಂಗಾಡಾ ಹೋಗುತ್ತೇನೆ**

– ಮುಕುರಿ ಮತ್ತು ಹೊಲೆಯರ ಪದಗಳು– ಪು.ಸಂ.2

ಈ ಸಾಲು ತಿಳಿಸುವಂತೆ, ಯಲುರಾಜನ ಮಡದಿಗೆ ತಳಸಮುದಾಯದ ಹೊಲೆಯ ಜಾತಿಯ ಹುಡುಗನೊಂದಿಗೆ ಅನುರಕ್ತಳಾದ ವಿಚಾರವನ್ನು ತಿಳಿಸುತ್ತದೆ. ಅವನ 'ಕೊರಳಿನ ದನಿ'ಗೆ ಆಕೆ ಮಾರುಹೋಗಿದ್ದಾಳೆ. ಈ ಸಂದರ್ಭವು ನಮಗೆ ಜನ್ನನ ಅಮೃತಮತಿಯನ್ನು ನೆನಪಿಸುತ್ತದೆ. ಇಲ್ಲಿ ವರ್ಗಸಂಘರ್ಷವಿದ್ದರು, ಅದನ್ನು ಪುರೋಹಿತಶಾಹಿಯ ನೆಲೆಗೆ ವರ್ಗಾಯಿಸುವುದರ ಹಿಂದೆ ಜಾತಿ ರಾಜಕಾರಣ ಹಾಗೂ ಪಾತಿವ್ರತ್ಯದ ನೆಲೆಯು ಅಡಗಿದೆ. ಆಕೆಯ ಹಣೆಬರಹವೇ ಹಾಗಿರುವಾಗ ನಾವೇನು ಮಾಡುವುದಕ್ಕೆ ಆಗದು ಎನ್ನುವ ರಾಜನ ಮಾತಿನಲ್ಲಿ ನೋವಿನ ದನಿಯಿದೆ ಎನ್ನುವುದಕ್ಕಿಂತ, ಗೌರವದ ಸವಾಲೇ ಕಣ್ಣಮುಂದೆ ಬಂದು ನಿಲ್ಲುತ್ತದೆ.

ಸಾಮಾಜಿಕ ಜೀವನದ ಮಗ್ಗುಲನ್ನೇ ಬದಲಿಸುವಂತಹ ಸ್ತ್ರೀಯ ಸಂವೇದನೆಗಳು ಈ ಹಾಡ್ಗತೆಗಳಲ್ಲಿ ಕಾಣಸಿಗುತ್ತವೆ. ಆಕೆಯ ಪ್ರತಿರೋಧದ ನೆಲೆಗಳನ್ನು ಗುರುತಿಸುವುದರ ಜೊತೆಗೆ ಅವಳ ಆತ್ಮಸ್ಥೈರ್ಯವನ್ನು ಪುಷ್ಟೀಕರಿಸುವ ಕಥನಗಳು ಇವೆ. 'ಒಡ್ಡರಬೋಯಿ' ಕಥನಕಾವ್ಯದಲ್ಲಿ ಬಲಿಯಾಗಲು ಒಪ್ಪದ ಹೆಣ್ಣೊಬ್ಬಳು 'ಬಡ್ಡಿಮಗ ನಮ್ಮ ಮಾವ ಕೆರೆಗೆ ಬಲಿ ಕೊಡ್ತಾನಂತೆ' ಎನ್ನುವ ಈ ಸಾಲಿನಲ್ಲಿ ಪ್ರತಿರೋಧದ ನೆಲೆಯನ್ನು ಗುರುತಿಸಬಹುದು.

ಇದೇ ರೀತಿ ಪ್ರತಿರೋಧ ವ್ಯಕ್ತಪಡಿಸಲು ಅವಕಾಶ ಇಲ್ಲದೇ ಇರುವಂತಹ ಹಾಡ್ಗತೆ ಎಂದರೆ ಅದು 'ಕೆರೆಗೆ ಹಾರ'ದ ಭಾಗೀರಥಿ. ಇಲ್ಲಿ ಆಕೆಯ ಪ್ರತಿರೋಧ ಕೇವಲ ಮೌನವಾಗಿರುತ್ತದೆ. ಹೇಳುವ ಹಂಬಲವಿದ್ದರೂ ಹೇಳಿಕೊಳ್ಳಲಾಗದ ಪರಿಸ್ಥಿತಿಗೆ ಭಾಗೀರಥಿ ಸಿಲುಕಿರುತ್ತಾಳೆ. ಹೇಗಾದರೂ ಸರಿ ತನ್ನ ನೋವಿನ ನಿವೇದನೆಯನ್ನು ಹೇಳಿಕೊಳ್ಳಲೇಬೇಕು ಎಂದು ಹೊರಟು ಗೆಳತಿಯಲ್ಲಿ

ನಿವೇದಿಸಿಕೊಂಡಾಗ 'ಕೊಟ್ಟಾರೆ ಕೊಡಲೇಳು ಇಟ್ಟಾಂಗ ಇರಬೇಕು' ಎಂದು ಹೇಳುವ ಈ ಮಾತು ಭಾಗೀರಥಿ ಒಡಲಾಳದ ಆಂತರಿಕ ತಾಕಲಾಟದ ಹಾಗೆಯೇ ಮೌನಿಯಾಗುತ್ತದೆ. ಇಲ್ಲಿ ಆಕೆ ಪ್ರತಿರೋಧಿಸುವುದಿಲ್ಲ ಬದಲಿಗೆ, ತನಗೆ ಆಗುತ್ತಿರುವ ಶೋಷಣೆಯನ್ನು ಪರೋಕ್ಷವಾಗಿ ತಿರಸ್ಕರಿಸುವ ಪ್ರಯತ್ನ ಮಾಡುತ್ತಾಳೆ. ಯಾರಾದರೂ ತನ್ನ ಪರವಾಗಿ ನಿಲ್ಲಬಹುದೇನೋ? ಎಂಬ ಹಂಬಲವೂ ಇತ್ತೆಂದು ಕಾಣುತ್ತದೆ. ತಳಸಮುದಾಯದ ಮಹಿಳೆಯರಿಗೆ ಅದನ್ನು ದಮನಕಾರಿಯಾದ ರೀತಿಯಲ್ಲಿ ಹತ್ತಿಕ್ಕುವ ಸಾಮಾಜಿಕ ಸಂದರ್ಭವಂತೂ ಸಂಪೂರ್ಣವಾಗಿ ಇಲ್ಲದ ಕಾಲವದು. ಹಾಗಾಗಿ ಆಕೆ ಕೇವಲ ತನ್ನ ಮನಸ್ಸಿನ ನೋವನ್ನು ತೋಡಿಕೊಳ್ಳಲಷ್ಟೇ ಸಾಧ್ಯವಾಗಿದ್ದಿತು. ಇದು ಒಂದು ರೀತಿಯ ಮೌನ ಪ್ರತಿಕ್ರಿಯೆಯು ಹೌದು.

ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣಿಗೆ ಪೂಜನೀಯ ಸ್ಥಾನವಿದೆ ಹೌದು, ಆದರೆ ಅದೇ ಹೆಣ್ಣಿಗೆ ಗರತಿಯ ಹಣೆಪಟ್ಟಿ ಕಟ್ಟಿ, ಕೇವಲ ಗೃಹಕ್ಕೆ ಮೀಸಲಾಗಿಸಿದ ಹುನ್ನಾರವೂ ಸಹ ಪಿತೃಪ್ರಧಾನ ವ್ಯವಸ್ಥೆಯ ನಂತರವೇ ಹೆಚ್ಚಾಗಿ ಕಾಣಸಿಗುತ್ತದೆ. ಮೊದಲು ಹೆಣ್ಣು ಪುರುಷನಂತೆ ತಾನೂ ಸರಿಸಮಾನಳಾಗಿ ದುಡಿಯುತ್ತಿದ್ದಳು. ಇಂತಹ ಮಹಿಳೆಯರನ್ನು ಕೇವಲ ಕೌಟುಂಬಿಕ ನಿರ್ವಹಣೆಗೆ ಸೀಮಿತಗೊಳಿಸಿ ಆ ಕೆಲಸಗಳಿಗೆ ಮೀಸಲಾಗಿಸಿದ್ದರು ಎಂಬುದನ್ನು ಈ ಕೆಳಗಿನ ಪದ ತೋರಿಸಿಕೊಡುತ್ತದೆ.

**ಹೆಣ್ಣಿದ್ದ ಮನೆಗೆ ಕನ್ನಡಿಯಾತಕ್ಕ**
**ಹೆಣ್ಣು ಸಣ್ಣವಳು ಒಳಗಿರಳು। ನನ ಮಗಳು।**
**ಕನ್ನಡಿಯಂಗ ಹೊಳೆಯುವಳು॥**

–ಗರತಿಯ ಹಾಡು– ಪು.ಸಂ 105

ಈ ಪದದಲ್ಲಿ ಮಹಿಳೆಯನ್ನು ಹೊಗಳಿರುವ ಅಂಶವೇ ಪ್ರಧಾನವಾಗಿದೆ. ಅದರ ಒಳಾರ್ಥವನ್ನು ಸೂಕ್ಷ್ಮವಾಗಿ ಗ್ರಹಿಸುವಾಗ ಮನೆಕೆಲಸವನ್ನು ಮಾಡಿ, ತೊಳೆದು, ಬೆಳಗಿ ಶುಚಿಗೊಳಿಸುವ ಅವಳೇ ಗೃಹಕೆಲಸಕ್ಕೆ ಸೂಕ್ತ. ಅವಳಿದ್ದರೆ ಮನೆ ಹೊಳೆಯುತ್ತದೆ. ಅಂತಹದೊಂದು ಬಲ ಆಕೆಯಲ್ಲಿದೆ ಎಂಬುದಾಗಿ ಕೇವಲ ಕುಟುಂಬಕ್ಕೆ ಸೀಮಿತಗೊಳಿಸುವ ಪದಗಳಿವು ಎಂಬುದನ್ನು ಈ ಸಾಲಿನಿಂದ ತಿಳಿಯಲು ಸಾಧ್ಯವಿದೆ. ಗರತಿಯಾಗಲು ಹೊರಟಾಗ ಹೆಣ್ಣನ್ನು ಕೇಳುವ ಮೊದಲ ಪ್ರಶ್ನೆಯೇ ನಿನಗೆ ಅಡುಗೆ ಮಾಡಲು ಬರುತ್ತದೆಯೇ? ಎಂಬ ವಿಚಾರ ಸರಣಿಯೇ ಮೊದಲು ಆರಂಭವಾಗುತ್ತದೆ. ಆಕೆ ಅಕ್ಷರಲೋಕಕ್ಕೆ ತೆರೆದುಕೊಂಡಾಗ ಅದೇ ಸಮಾಜ 'ಅಡುಗೆಮನೆ ಸಾಹಿತ್ಯ' ಎಂಬ ಕೊಂಕಿಗೆ ಒಳಗಾಗಿಸಿದೆ. ಲಿಂಗ ತರತಮತೆಯಿಂದ ಆರಂಭವಾಗುವ ಈ ಎಲ್ಲಾ ಅಂಶಗಳು ಹೆಣ್ಣೆಂಬ ಕಾರಣಕ್ಕೆ ಆಕೆಯನ್ನು ಎರಡನೇ ದರ್ಜೆಯ ಪ್ರಜೆಯಾಗಿ ನೋಡುವ ಮನೋಭಾವ ಆರಂಭವಾಯಿತು. ಭೌತಿಕವಾಗಿ

ಹೆಣ್ಣು ಬಲಹೀನಳು ಎಂಬಿತ್ಯಾದಿ ಪಟ್ಟಿಕಟ್ಟಿ ಸಾಮಾಜಿಕ ವ್ಯವಸ್ಥೆಯಲ್ಲಿ ಬಂಧಿಸಿದರು. ಇಂತಹ ಹಲವಾರು ವಿಚಾರಗಳನ್ನು, ನೈಜ ಬದುಕಿನ ಸಂಗತಿಗಳನ್ನು ಜನಪದ ಹಾಡ್ಗತೆಗಳು ಅನಾವರಣಗೊಳಿಸಿವೆ.

"ಲೋಕದಲ್ಲಿ ಬೆಲೆಬಾಳುವ ವಸ್ತುವಿಗೆ ಬೇಡಿಕೆ ಇದ್ದೇ ಇದೆ. ಬೇಡುವ ಪೂರ್ವದಲ್ಲಿ ಆ ವಸ್ತುವಿನ ಬೆಲೆ ಕಟ್ಟಬೇಕಾಗುತ್ತದೆ. ಮೊದಲು ಆ ವಸ್ತುವನ್ನು ಬೆಲೆಯುಳ್ಳ ವಸ್ತುವಿನೊಡನೆ ಹೋಲಿಸುತ್ತೇವೆ. ತರತಮ ಭಾವದಿಂದ ಅದರ ಬೆಲೆಯನ್ನು ನಿರ್ಧರಿಸಿಪಡಿಸುತ್ತೇವೆ. ಮನಸ್ಸು ಒಪ್ಪಿದರೆ ಆ ವಸ್ತುವನ್ನು ಕೊಂಡು ಸ್ವಂತದ್ದಾಗಿ ಉಪಯೋಗಿಸುತ್ತೇವೆ. ಆ ವಸ್ತುವಿನಿಂದ ನಮ್ಮ ಬಾಳಿಗೆ ಪ್ರಯೋಜನವಾಗುವುದು ಮುಖ್ಯ"[2] ಎನ್ನುವ ಈ ಸಾಲು ಮಹಿಳೆಯ ಮೇಲೆ ಹೇರಲಾದ ಕಟ್ಟಳೆಗಳು, ತರತಮ ಭಾವದ ಸಂವೇದನೆಯನ್ನು ಹೊರಹಾಕುತ್ತದೆ. ಹೆಣ್ಣನ್ನು ನೋಡಿರುವ ಸಂಸ್ಕೃತಿಯನ್ನು ಹೆಣ್ಣುಗಳೇ ಜನಪದ ಹಾಡ್ಗತೆಗಳಲ್ಲಿ ತಮ್ಮ ಬವಣೆಗಳಾಗಿ ಕಟ್ಟಿಕೊಟ್ಟಿದ್ದಾರೆ.

ಮಹಿಳೆಯರು ತಮಗೆ ಮೌಲ್ಯಯುತವಾದ ಸ್ಥಾನ ಬೆಲೆ ಸಿಗದೇ ಹೋದಾಗ, ಸ್ವತಃ ಶೋಷಿತಳಾದ ಅವಳು ಪುರುಷನನ್ನು ಪ್ರತಿರೋಧಿಸುವ ನೆಲೆಯಲ್ಲಿ ತನ್ನ ಸ್ಥಾನಕ್ಕಾಗಿ ಮತ್ತೊರ್ವ ಹೆಣ್ಣನ್ನೇ ಶೋಷಿಸುತ್ತಾಳೆ. ಇದು ಮೊದಲನೆ ಆಯಾಮವಾದರೆ ಎರಡನೆಯದು ಪುರುಷ ತನ್ನ ಒಳಿತಿಗಾಗಿ, ಕುಟುಂಬದ ಒಳಿತಿಗಾಗಿ ಮಹಿಳೆಯನ್ನೇ ಬಲಿಕೊಡುವ ಆಚರಣೆಯನ್ನು ರೂಢಿಸಿಕೊಂಡ. ಅದರಲ್ಲೂ ತಳಸಮುದಾಯದ ಮಹಿಳೆಯನ್ನು ಹೆಚ್ಚಾಗಿ ಬಲಿಗೆ ಮಾನಸಿಕವಾಗಿಯೂ ದೈಹಿಕವಾಗಿಯೂ ಸನ್ನದ್ಧಗೊಳಿಸಲಾಗುತ್ತಿತ್ತು. ಹಾಗೂ ಮೂರನೆಯದಾಗಿ ಜೈವಿಕ ಅಂಶದಿಂದ ಬಂಜೆತನದ ಸಂವೇದನೆಯನ್ನು ಮನಮುಟ್ಟುವಂತೆ ಕಾವ್ಯಕಥನಗಳಲ್ಲಿ ಅನಾವರಣಗೊಳಿಸಲಾಗಿದೆ.

ಮೊದಲನೆ ಆಯಾಮ ಮೇಲೆ ಹೇಳಿದಂತೆ ಹೆಣ್ಣು ಹೆಣ್ಣನ್ನೇ ಶೋಷಿಸುವ ಪರಿ "ಕಿರುಕುಳ ಕೊಡುವವರು ಅತ್ತೆ-ನಾದಿನಿ, ಒರಗಿತ್ತಿ, ಅತ್ತಿಗೆ ಮುಂತಾದವರು ಮಹಿಳೆಯರೇ ಆಗಿರುತ್ತಾರೆ. ಅಂತೆಯೇ ಹೊಟ್ಟೆಯಲ್ಲಿ ಹೆಣ್ಣು ಮಗುವಿದೆ ಎಂದು ಗೊತ್ತಾದರೆ ಸ್ವಂತ ಸ್ತ್ರೀಯರೇ ಮೊದಲು ಹೆಣ್ಣು ಶಿಶುವನ್ನು ಹೊಸಕಿ ಹಾಕಲು ಬಯಸುತ್ತಾರೆ"[3] ಹೆಣ್ಣಿಗೆ ಹೆಣ್ಣೇ ಶತ್ರು ಏಕೆ? ಹಾಗೆ ಆಗಲು ಕಾರಣವೇನು? ಎಂಬಿತ್ಯಾದಿ ಸಂಗತಿಗಳನ್ನು ಕೆದಕುತ್ತಾ ಹೋದಂತೆ ಅವರು ಶೋಷಣೆಯಿಂದ ಬೇಸತ್ತು ತಾವೂ ಶೋಷಿಸಲು ಆರಂಭಿಸುತ್ತಾರೆ ಎನ್ನುವುದನ್ನು ಎರಡು ಆಯಾಮದ ಸಂವೇದನೆಗಳಲ್ಲಿ ಕಾಣಬಹುದು. ಇದಕ್ಕೆ ಪ್ರಮುಖ ಕಾರಣವೇ ಸ್ಥಾನಮಾನದ ಪ್ರಶ್ನೆ. ತನ್ನಂತೆ ಮತ್ತೊಂದು ಹೆಣ್ಣು ನೋವನ್ನು ಅನುಭವಿಸಬಾರದು ಎಂಬ ಮತ್ತೊಂದು

ಸಹ ಸಂವೇದನೆ ಆಂತರಿಕವಾಗಿ ತೋರಿದರೂ ನೋಡುವವರ ದೃಷ್ಟಿಕೋನದಲ್ಲಿ ಮಹಿಳೆಯೇ ಶೋಷಿಸುವವಳಾಗಿ ಕಾಣಿಸುತ್ತಾಳೆ.

ಎರಡನೆಯದಾಗಿ ಪುರುಷ ತನ್ನ ಕುಟುಂಬದ ಒಳಿತಿಗಾಗಿ ಬಲಿ, ಹಾರ ನೀಡುವಂತದ್ದು. ಆದರೆ ಅಲ್ಲಿ ಬಲಿಯಾಗುವ ಹೆಣ್ಣುಮನದ ನೋವಿಗೆ ಯಾವುದೇ ಸ್ಪಂದನೆ ಇರುವುದಿಲ್ಲ, ಮಿಡಿಯುವುದುದೂ ಇಲ್ಲ ಅಲ್ಲಿ ಕೇವಲ ಯಾಂತ್ರಿಕತೆಯನ್ನಷ್ಟೇ ನೋಡಲು ಸಾಧ್ಯ. ಅಂತಹ ಹಾಡ್ಗತೆಗಳನ್ನು ಜನಪದರು ಅದರಲ್ಲೂ ನಮ್ಮ ಮಹಿಳೆಯರು ಕಟ್ಟಿಕೊಟ್ಟಿದ್ದಾರೆ. ಇದು ಮೌಖಿಕ ಪರಂಪರೆಗೆ ಇರುವ ಮತ್ತೊಂದು ಅದ್ಭುತವಾದ ಶಕ್ತಿ ಆದರೆ ತ್ಯಾಗ, ಪಾತಿವ್ರತ್ಯ, ಬಲಿದಾನ ಹೀಗೆ ಅನೇಕ ರೀತಿಯಲ್ಲಿ ಸಾಮಾಜಿಕವಾಗಿ ಬಂಧಿಸಲ್ಪಟ್ಟಿದ್ದು ಮಾತ್ರ ಶೋಚನೀಯ ಸಂಗತಿಯಾಗಿತ್ತು. ಇಂತಹ ಹಾಡ್ಗತೆಗೆ ಉದಾಹರಣೆ ಎಂದರೆ 'ಕೆಂಚಮ್ಮ ಕಥನಕಾವ್ಯ'. ಇಲ್ಲಿ ಗೌಡ ಕೆರೆ ತೋಡಿಸುತ್ತಾನೆ. ಕೆರೆಯಲ್ಲಿ ನೀರು ಬರುವುದಿಲ್ಲ. ಹೊಸ ಬಾವಿಗೆ ಸೊಸೆ ಕೆಂಚಮ್ಮನನ್ನು ಬಲಿಕೊಡಬೇಕೆಂದು ಗಂಗೆ ಕೇಳುತ್ತಾಳೆ. ಆದರೆ ತಾನು ಹಸಿ ಬಾಣಂತಿಯಾದರೂ, ಮಾವನ ಮಾತಿಗೆ ಬೆಲೆಕೊಟ್ಟು ಬಲಿಗೆ ಮೌನವಾಗಿ ಅಣಿಯಾಗುತ್ತಾಳೆ.

**ಕೇಳೇ ಕೇಳೇ ಕೆಂಚಮ್ಮ ನೀ ಕೇಳ ನನ್ನ ಮಾತಾ**
**ಇಲ್ಲಿ ಮಿಂದು ಹೋಗು ಎಂದೇಳ್ದ| ಯಜಮಾನ ಗೌಡ**
**ಕೂಲಿ ಕೊಟ್ಟು ಬಗೆಸೇನು||**

–ಕೆಂಚಮ್ಮ ಕಥನಕಾವ್ಯ

ಈ ಕಥನದಲ್ಲಿ ಗೌಡ ಕಟ್ಟಿಸಿದ ಕೆರೆಗೆ ಬಲಿಕೊಡಬೇಕಾಗಿ ಬಂದಾಗ, ನೇರವಾಗಿ ಬಲಿ ಎಂದು ಹೇಳದೆ 'ಕೆರೆಯಲ್ಲಿ ಒಮ್ಮೆ ಮಿಂದು ಬಾರಮ್ಮ' ಎಂದು ಸೌಮ್ಯವಾಗೇ ಬಲಿಯಾಗು ಎನ್ನುವ ಚಿತ್ರಣವನ್ನು ಈ ಹಾಡ್ಗತೆಯಲ್ಲಿ ಕಾಣಬಹುದಾಗಿದೆ.

ಇಲ್ಲಿನ ಹಾಡ್ಗತೆ/ಕಥನಗೀತೆಯನ್ನು ಓದಿಕೊಂಡಾಗ ಎಲ್ಲಿಯೂ ಸಹ ಪ್ರತಿರೋಧ ಒಡ್ಡುವ ಮನಸ್ಥಿತಿ ಕಾಣಸಿಗುವುದಿಲ್ಲ. ಬದಲಿಗೆ 'ತನ್ನನ್ನು ಗಂಗೆ ಕರೆದಿದ್ದಾಳೆ ನಾ ಹೋಗಿ ಮಿಂದು ಬತ್ತಿನಿ' ಎನ್ನುವ ಮಾತೇ ಆಕೆಯ ಮನದಾಳದ ನೋವಿನ ಸಂವೇದನೆಯನ್ನು ಗುರುತಿಸಲು ಸಾಧ್ಯವಿದೆ. ಹಾಡ್ಗತೆಗಳಲ್ಲಿ ಎಲ್ಲಿಯೂ ಪುರುಷ ನೇರ ಹೊಣೆಗಾರನಾಗಿ ಕಾಣಸಿಗುವುದಿಲ್ಲ ಬದಲಿಗೆ 'ದೇವಗನ್ನೇರು'ಗಳ ಮೂಲಕ ಹೇಳಿಸುವುದರ ಜೊತೆಗೆ ಪುರೋಹಿತಶಾಹಿಯ ಪ್ರಜ್ಞೆ ಇಲ್ಲಿ ಗುಪ್ತವಾಗಿದೆ. ಇಲ್ಲಿ ದೇವಗನ್ನೇರು ಎಂದರೆ ಆತ ಕೂಲಿ ಕೊಟ್ಟು ಕಳುಹಿದ ಕೆಲಸದ ಆಳುಗಳೋ ಅಥವಾ ಇನ್ನಾರೋ ಇತರ ಸ್ತ್ರೀಯರೇ ಆಗಿರುತ್ತಾರೆ. ನಮಗಿಲ್ಲಿ ಗಂಗೆಯೇ ಮಾತಾಡುತ್ತಾಳೆ ಎನ್ನುವ ದೃಷ್ಟಾಂತವನ್ನು ಇಲ್ಲಿ ಕೊಡಲಾಗಿದೆ.

**ಉದಾ:**

**ನಿನ್ನಾಣೆ ಮಾವನು ಕೆರೆಕಟ್ಟಿಸುವಾಗ**
**ಕೊಟ್ಟೆನೆಂದಿದ್ದ ಹಿರಿ ಸೊಸೆಯ ಕೆಂಚಮ್ಮನ। ನೀನೀಗ**
**ಬರಬೇಕು ನಮ್ಮ ಸಂಗಡವೀಗ॥**

–ಮದಗದ ಕೆಂಚಮ್ಮ ಕಥನಕಾವ್ಯ

ಪುರುಷನ ವ್ಯಕ್ತಿತ್ವಕ್ಕೆ, ಮೌಲ್ಯಕ್ಕೆ ಕುಂದು ಉಂಟಾಗದಂತೆಯೇ ಇಲ್ಲಿನ ವ್ಯವಸ್ಥೆಯೂ ಸಹ ಆತನ ಬಗೆಗೆ ಜಾಗರೂಕ ನಿರ್ಧಾರವನ್ನು ತೆಗೆದುಕೊಳ್ಳುತ್ತವೆ ಎಂಬುದಕ್ಕೆ ಈ ಕಥನವನ್ನು ಉದಾಹರಿಸಬಹುದು. ಅಧೀನ ಸಂಸ್ಕೃತಿಯೊಳಗೆ ಹೆಣ್ಣಿಗೆ ಅವಕಾಶದ ಆಯ್ಕೆಯೇ ಇರುವುದಿಲ್ಲ. ಪುರುಷ ಮಾತ್ರ ಮೌನವಹಿಸಿ, ಹೆಣ್ಣಿನ ಮುಖೇನವೇ ಮೃದುವಾಗಿ ಮಾತನಾಡಿಸುತ್ತಾನೆ. ಆ ಮೃದುತನದೊಳಗೆ ಕ್ರೌರ್ಯದ ಮನೋಭಾವವೇ ಪ್ರಧಾನ ನೆಲೆಯಾಗಿರುತ್ತದೆ. ಹಾಡ್ಗತೆಗಳೊಳಗೆ ಇದು ಗೌಣವಾದ ಅಂಶ. ಹೆಣ್ಣನ್ನು ದೇವಿಯಂತೆ ಪೂಜಿಸುವ ಇವನು, ಮತ್ತೊಂದು ವಿವಾಹಕ್ಕೆ ಹಾತೊರೆವ ಢೋಂಗಿತನದ ಆಲೋಚನೆಗಳೇ ಹೆಚ್ಚು. ಇಂತಹ ಸಂದರ್ಭದಲ್ಲಿ ಹೆಣ್ಣು ಪ್ರತಿಕ್ರಿಯೆ ನೀಡದೆ, ಪ್ರತಿರೋಧಿಸದೆ ಮೌನಿಯಾಗಿದ್ದರೆ ಆಕೆ ಮುಗ್ಧೆ, ಒಳ್ಳೆಯವಳು. ಇಲ್ಲವಾದಲ್ಲಿ ನಮ್ಮ ಶಿಷ್ಟ ಸಮಾಜ ಆಕೆಯನ್ನು ಗಂಡುಬೀರಿ, ಗಯ್ಯಾಳಿಯೆಂದೇ ಕರೆಯುತ್ತದೆ. ಹಾಗೆಂದ ಮಾತ್ರಕ್ಕೆ ಮೌನಕ್ಕೆ ಶರಣಾಗಲಿಲ್ಲ. ಸಮಾಜಕ್ಕೆ ಪ್ರತಿರೋಧವನ್ನು ವ್ಯಕ್ತಪಡಿಸಿರುವ ಸಂಗತಿಗಳು ಮೌಖಿಕ ಕಾವ್ಯಗಳಲ್ಲಿವೆ. ಅವು ಹೆಣ್ಣಿನ ಆಲೋಚನೆಗಳಲ್ಲಿವೆ.

ಆಧುನಿಕ ಸಮಾಜದಲ್ಲಿ ಜನಪದಕ್ಕಿಂತ ಭಿನ್ನವಾದ ಆಲೋಚನೆಗಳು ತಕ್ಕಮಟ್ಟಿಗೆ ಕಂಡುಬಂದರೂ ಅಕ್ಷರಸ್ಥ ಸಮಾಜದಲ್ಲಿ ಮಹಿಳಾ ದೌರ್ಜನ್ಯಗಳು ನಡೆಯುತ್ತಲೇ ಇವೆ. ಉನ್ನತ ಶಿಕ್ಷಣ ಪಡೆದರೂ ಬದಲಾಗದ ವ್ಯವಸ್ಥೆಯೊಳಗೆ ಹೆಣ್ಣಿನ ಸಂವೇದನೆ ಗೌಣವಾಗಿದೆ. ಪುರುಷ ಸಮನಾಗಿ ನಿಂತರೂ, ಸ್ವಲ್ಪಮಟ್ಟಿಗೆ ಸಮಾಜಮುಖಿಯಾಗಲು ಅವಕಾಶವಿದ್ದರೂ ಮತ್ತೆ ಮತ್ತೆ ಕೌಟುಂಬಿಕ ಚೌಕಟ್ಟಿನೊಳಗೆ ಭೌತಿಕವಾಗಿ ಕಟ್ಟಲ್ಪಡುತ್ತಾಳೆ. ಅಲ್ಲಿಯೂ ಆಂತರಿಕವಾದ ನಿಷೇಧಗಳಿವೆ ಆದರೆ ಅವು ಅಂತರ್ಮುಖಿಯಾಗಿವೆ. ಇದರಿಂದ ಮಹಿಳೆಯನ್ನು ಒಂದಲ್ಲಾ ಒಂದು ರೀತಿಯಲ್ಲಿ ಶೋಷಣೆಗೆ ಒಳಗು ಮಾಡುತ್ತಿರುವುದು ವಿಷಾದನೀಯ ಸಂಗತಿಯಾಗಿದೆ. ಹೀಗೆ ಹಾಡ್ಗತೆಗಳು ವಿಷಮ ಪರಿಸ್ಥಿತಿಯ ವಿಚಾರಗಳಾದ ಜಾತಿ ಸಂಘರ್ಷ, ಧರ್ಮ ಸಂಘರ್ಷ ಹಾಗೂ ಕೋಮುವಾದದಂತಹ ಸೂಕ್ಷ್ಮ ವಿಚಾರಗಳ ವಿಶ್ಲೇಷಣೆಗೆ ಎಡೆ ಮಾಡಿಕೊಟ್ಟಿವೆ.

**ಕೊನೆ ಟಿಪ್ಪಣಿಗಳು:**

1. ರಮೇಶ್ ಸ.ಚಿ. (ಸಂ). (2006), ಜಾನಪದ ಕರ್ನಾಟಕ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ. 137
2. ಸುಂಕಾಪುರ ಎಂ.ಎಸ್. (ಸಂ), (2018), ಗರತಿಯ ಗರಿಮೆ, ಪೊಡವಿ ಪ್ರಕಾಶನ, ಮೈಸೂರು, ಪು.ಸಂ. 8
3. ವಸುಂಧರಾ ಭೂಪತಿ, (2017), ಮಹಿಳೆ ಮತ್ತು ಮೌಢ್ಯ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ಪು.ಸಂ. 17

**ಪರಾಮರ್ಶನ ಗ್ರಂಥಗಳು:**

1. ಹಲಸಂಗಿ ಗೆಳೆಯರು (ಸಂ), (2018), ಗರತಿಯ ಹಾಡು, ಸಮಾಜ ಪುಸ್ತಕಾಲಯ, ಧಾರವಾಡ.
2. ಸುಂಕಾಪುರ ಎಂ.ಎಸ್. (ಸಂ), (2018), ಗರತಿಯ ಗರಿಮೆ, ಪೊಡವಿ ಪ್ರಕಾಶನ, ಮೈಸೂರು.
3. ರಾಮಚಂದ್ರೇ ಗೌಡ ಹಿ.ಶಿ., (2008), ಜಾನಪದ ದೇಶಿ: ಸಿದ್ಧಾಂತ ಮತ್ತು ಪ್ರಯೋಗ, ವಿಜಯಲಕ್ಷ್ಮಿ ಪ್ರಕಾಶನ, ಮೈಸೂರು.
4. ವಸುಂಧರಾ ಭೂಪತಿ, (2017), ಮಹಿಳೆ ಮತ್ತು ಮೌಢ್ಯ, ನವಕರ್ನಾಟಕ ಪ್ರಕಾಶನ, ಬೆಂಗಳೂರು.
5. ಹೆಗಡೆ ಎಲ್.ಆರ್., (1979), ಯಲುರಾಜನ ಮಡದಿ, ಮುಕುರಿ ಮತ್ತು ಹೊಲೆಯರ ಪದಗಳು, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
6. ಕೃಷ್ಣಮೂರ್ತಿ ಕ.ರಾ., (1962), ಮರೆಯಾದ ಮಲಕವ್ವ, ಅಂಬಿಗರ ಗಂಗ ಮತ್ತು ಇತರ ಹಾಡುಗಳು, ಜಾನಪದ ಸಾಹಿತ್ಯ ಅಕಾಡೆಮಿ, ಮೈಸೂರು.

**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.

**About the License:**
© The Authors 2024. The text of this article is open access and licensed under a Creative Commons Attribution 4.0 International License.